ಹೊಸತು, ಹೊಸತು ಮಾಡಿ ಗಿರಾಕಿಗಳು ಅತ್ತಿತ್ತ ಹೋಗದಂತೆ ಲಕ್ಷ್ಯ ವಹಿಸುವನು. ಯಾರಾದರೂ ಅವರ ದಾಂಪತ್ಯ ಕಲಹದ ಬಗ್ಗೆ ಮಾತು ತೆಗೆದರೆ, ಮೊನ್ನೆ ರಾತ್ರಿ ಹೀಗಾಯಿತಂತೆ ಎಂದರೆ ಆತ ಜೋರಾಗಿ ನಕ್ಕು ಆ ಸಂದರ್ಭವನ್ನು ತೇಲಿಸಿಬಿಡುವನು. ತೇಲಿಸುವುದನ್ನು ಅವನಿಗೆ ಕಲಿಸಬೇಕೆ? ಹಚ್ಚಹಸಿರಿನ ಮೆಣಸಿನಕಾಯಿಯನ್ನು ಕಡಲೆಹಿಟ್ಟಿನಲ್ಲಿ ಕಲೆಸಿ ಸಳಸಳ ಕುದಿಯುತ್ತಿರುವ ಶೇಂಗಾ ಎಣ್ಣೆಯಲ್ಲಿ ಬಿಡುವನು. ಕೊತಕೊತವೆಂದು ಅವು ಕುದಿಯುತ್ತಿದ್ದಂತೆ ಮಿರ್ಚಿಯನ್ನು ಕರಿದ ಸುವಾಸನೆ ಆ ವಾತಾವರಣದಲ್ಲಿ ಎಷ್ಟು ಬೇಗ ಹರಡಿಕೊಳ್ಳುತ್ತಿತ್ತು. ಬೈಲಹೊಂಗಲದಿಂದ ಇಲ್ಲಿಗೆ ಯಾವುದಾದರೂ ಕೆಲಸಕ್ಕೆಂದು ಬಂದವರು ಮಲ್ಲೂರಿನ ಮಿರ್ಚಿಗಳನ್ನು ಕಟ್ಟಿಸಿಕೊಂಡು ಹೋಗಲು ಮರೆಯುತ್ತಿರಲಿಲ್ಲ. ಹೀಗಾಗಿ ಬೈಲಹೊಂಗಲ, ಸಂಪಗಾಂವ, ಬಾಗೇವಾಡಿ, ಇಂಚಲ ಮುಂತಾದ ಕಡೆ ದೇವಪ್ಪನ ಮಾತೇ ಮಾತು. ಹೊಂಗಲ ಬಸ್‌ಸ್ಟ್ಯಾಂಡ್‌ನಲ್ಲಿದ್ದ ಹೊಟೇಲಿನ ಮಾಲಿಕ ಇತ್ತೀಚೆಗೆ ದೇವಣ್ಣನನ್ನು ವಿಚಾರಿಸಿದ್ದ.

'ನೋಡು ದೇವಣ್ಣ, ಹಳ್ಳಿಯೊಳಗಿನ ಚಾದಂಗಡಿಯಿಂದ ಎಷ್ಟು ಗಳಿಸಾಂವ ಅದಿ. ಅದನ್ನ ಬ್ಯಾರೆದವರಿಗೆ ಮಾಡಾಕ ಹಚ್ಚು. ನೀನು ನಮ್ಮ ಹೊಟೇಲಿಗೆ ಬಾ. ತಿಂಗಳಾ ಎರಡು ಸಾವಿರ ರೂಪಾಯಿ ಕೊಡತೇನಿ. ಆಮ್ಯಾಲ ವರ್ಷ ವರ್ಷ ಹೆಚ್ಚಿಗೆ ಮಾಡತೇವಿ. ಅದರ ಜೋಡಿ ನಿನ್ನ ಊಟ ಉಪಚಾರದ ಖರ್ಚು ಸೈತ ನಮ್ಮದೇ. ವಿಚಾರ ಮಾಡು.'

ದೇವಪ್ಪನಿಗೆ ಮನಸ್ಸು ತುಸು ಹೊಯ್ದಾಡಿತು. ಊರಲ್ಲಿ ಹೆಂಡತಿ ಹೇಗೂ ನಡೆಸಿಕೊಂಡು ಹೋಗುತ್ತಿದ್ದಾಳೆ. ಬೈಲಹೊಂಗಲಕ್ಕೆ ಹೋಗಿಬಿಡಲೆ? ಆದರೆ ಕಷ್ಟಕಾಲದಲ್ಲಿ ಕೈ ಹಿಡಿದ ಊರು ಮಲ್ಲೂರು. ಉಣ್ಣುವ ತಟ್ಟೆಯನ್ನು ಒದ್ದು ಬರುವುದೆ? ಸಲ್ಲದು. ಅಲ್ಲದೆ ತಾನಿಲ್ಲವೆಂದರೆ ಮಲ್ಲೂರಿನ ಹೊಟೇಲು ಈಗ ನಡೆದಿರುವಂತೆಯೆ ನಡೆದೀತೆಂದು ಹೇಗೆ ಹೇಳುವುದು? ಹಾಗಾಗಿ ಅವರಿಗೆ ನಯವಾಗಿಯೇ ಹೇಳಿದ. 'ಮುಂದ ಯಾವಾಗಲಾದ್ರೂ ನೋಡೋಣ ತಗೋರಿ ಮಾಲಿಕರೆ. ಸದ್ಯ ಮಲ್ಲೂರಿನ್ಯಾಗ ನಾ ಇಲ್ಲಂದ್ರ ನಡಿಯಂಗಿಲ್ಲ.'

***

ದೇವಣ್ಣ ಮತ್ತು ಅನಸವ್ವರ ಕಲಹ ಇಡೀ ಊರನ್ನೇ ಕೋಲಾಹಲಗೊಳಿಸುತ್ತಿತ್ತು. ಅದಕ್ಕೆ ಕೆಲವರು ಬಣ್ಣ ಹಚ್ಚಿ ಮುಂದಕ್ಕೆ ರವಾನಿಸುವವರೂ ಇದ್ದರು. ಹಾಗೆ ಕಲಹವಾದ ಮೇಲೆ ಮತ್ತೆ ಹದಿನೈದು ದಿನವೋ, ತಿಂಗಳೋ, ಎರಡು ತಿಂಗಳೋ ಹೊಟೇಲು ಶಾಂತವಾಗಿರುತ್ತಿತ್ತು. ಹೊಟೇಲು ಶಾಂತವಾಗಿದೆಯೆಂದರೆ ಊರು ಸಹ ಶಾಂತವಿದ್ದಂತೆಯೇ. ಊರು ಶಾಂತವಾಗಿರದಿದ್ದರೂ ಅದು ಲೆಕ್ಕಕ್ಕಿಲ್ಲ. ಊರಲ್ಲಿ ಮುಖಾಮುಖಿ ಕಾದಾಟಗಳು ಇರುತ್ತಿದ್ದವಾದರೂ ದೇವಪ್ಪಅನುಸೂಯ ನಡುವಿನ ಘರ್ಷಣೆಗಳು ಸುದ್ದಿಯಾದಷ್ಟು ಅವು ಸುದ್ದಿಯಾಗುತ್ತಿರಲಿಲ್ಲ.



'ಚಾದಂಗಡಿಗೆ ಸುಮ್ಮಸುಮ್ಮನೆ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಅಲ್ಲಿ ಹೂಸು ಬಿಟ್ಟರೂ ಸುದ್ದಿಯಾಗುತ್ತದೆ ಬಿಡಪಾ' ಎಂದು ಕೆಲವರು ಆ ಕಡೆ ಕಾಲು ಹಾಕಿ ಮಲಗುತ್ತಿರಲಿಲ್ಲ. ನೂರಾರು ಜನರಿಗೆ ವಿಚಿತ್ರವೆನಿಸುವ ಸಂಗತಿಯೆಂದರೆ ಅವರಿಬ್ಬರ ಕಾದಾಟ ಮುಗಿದ ಒಂದೆರಡು ದಿನದಿಂದ ಅವರು ಮತ್ತೆ ಮೊದಲಿನ ಅನ್ಯೋನ್ಯತೆಯಿಂದ ಇರುವುದು! ದೇವ್ಪ್ಯಾ, ಅನುಸೂಯೆ ಒಬ್ಬರಿಗೊಬ್ಬರು ಅಕ್ಕರೆಯಿಂದ ಕರೆಯುವುದೇನು! ಪ್ರೀತಿಯಿಂದ ಮಾತಾಡಿಸುವುದೇನು! ಹೆಂಡತಿಯೆಂದರೆ ತನಗೆಷ್ಟು ಪ್ರೇಮವೆಂದು ಆತ ಜಾಹೀರ ಮಾಡುವುದೇನು!

'ಅನುಸೂ, ಏಯ್ ಅನುಸೂ, ನೋಡಲ್ಲಿ. ಅವರು ಏನೋ ಕೇಳ್ತಾ ಇದಾರೆ ನೋಡು. ಏನು ಬೇಕು, ಕೇಳು. ಹನುಮಂತಣ್ಣ, ಇವತ್ತಿನ ವಗ್ಗರಣಿ ಅವಲಕ್ಕಿ ಬಾಳ ಚುಲೋ ಆಗೇತಿ ಅಂದೆಲ್ಲ. ವಗ್ಗರಣಿ ಕಲಿಸಿದ್ದು ಅನುಸೂಯಾ ನೋಡ್ರಿ. ಆಕಿ ಹಚ್ಚಿದ್ದ ಅವಲಕ್ಕಿ ತುಂಬ ಮೆತ್ತಗನೂ, ಮಿಜ್ಜಿಯಾಗಲಾರದಂಗ ಬಿಡಿಬಿಡಿಸಿಯೂ ಇರ್ತದ, ಅಲ್ಲ? ಹೂಂ. ನೀವು ಹೇಳಿದಂಗ ಅದರೊಳಗ ಅನುಸೂಯಾ ಶೇಂಗಾ ಮತ್ತು ಪುಟಾಣಿ ಬೆರೆಸೋದು ಮಜಾ ಇರ್ತದ. ಅದನ್ನೆಲ್ಲ ಸ್ವಾದ ನೋಡಿಕೊಂಡು ಹಾಕಬೇಕಾಗ್ತದ. ಮಲ್ಲಪ್ಪ ದೊಡ್ಡಪ್ಪ ಹೇಳಿದಂಗ ಆಕೀ ಹಂಗ ನಮಗ ಯಾರಿಗೂ ವಗ್ಗರಣಿ ಮಾಡಲಿಕ್ಕೆ ಬರಂಗಿಲ್ಲ. ಅಲ್ಲೇನು ದೊಡ್ಡಪ್ಪ? ಹೂಂ, ಆ ಕೊತ್ತಂಬರಿ ಕೇಳಿದೆಲ್ಲ? ಅದು ನಮ್ಮ ಹೊಲದಾಗ ಬೆಳೆದಿದ್ದು ನೋಡ್ರಿ. ಎಷ್ಟು ಘಮಘಮ ಅಂತೀರಿ. ಕರಿಬೇವು, ಕೊತ್ತಂಬರಿ ಎರಡೂ ಜವಾರಿ. ಕರಿಬೇವಿನ ಗಿಡ ಅನಸೂನೇ ಹಚ್ಚಿದ್ದು, ಆಕೀನೆ ನೀರು ಉಣಿಸಿದ್ದು, ದೇಖರೇಖಿ ಮಾಡಿದ್ದು. ಈ ಸಲ ಹೊಲದಾಗ ಕೋಸು ಹಾಕಬೇಕಂತ ಮಾಡೇವಿ. ಆದರೆ ನೀರಿಂದೆ ಸಮಸ್ಯೆ. ಅದಕ್ಕ ನಾ ಬ್ಯಾಡ ಅಂತ ಹೇಳಾಕ ಹತ್ತೇನಿ.'

ಗಂಡನ ಪ್ರಶಂಸೆಯಿಂದ ಅವಳ ಉತ್ಸಾಹ ತುಂಬ ಔನ್ನತ್ಯಕ್ಕೆ ಏರುತ್ತಿತ್ತು. ಆಕೆಯ ಕಣ್ಣುಗಳಲ್ಲಿ ಇನ್ನಿಲ್ಲದ ಹೊಳಪು ಮೂಡುತ್ತಿತ್ತು. ಗಂಡ ಮೆಚ್ಚುಗೆ ವ್ಯಕ್ತಪಡಿಸಿರುವಾಗ ತಾನು ಸುಮ್ಮನಿರಲಾದೀತೆ? ಅವಳೂ ತನ್ನ ಋಣ ತೀರಿಸುತ್ತಿದ್ದಳು.

'ನೀವು ಭಾಳ ದಣಿದೀರಿ, ಮುಂಜಾನೆಯಿಂದ ಕೆಲಸದ ಮ್ಯಾಲ ಕೆಲಸ ಆಗೇದ. ಅಲ್ಲಿ, ಇಂಥ ಬಿಸಿಲಾಗ ಎದಕ್ಕ ಹೊರಗ ಹೋಗಿದ್ರಿ. ಬರ್ರಿ, ಊಟ ಮಾಡಿ ಸ್ವಲ್ಪ ಅಡ್ಡಾಗ್ರಿ. ಅರ್ಧ ತಾಸು ಮಲಕ್ಕೊಂಡು ಎದ್ರ ದೇಹಕ್ಕ ಆರಾಮ ಅನಿಸ್ತದ.' ಅವಳಲ್ಲಿ ಅನುಕಂಪದ ಸಮುದ್ರವೆ ಇತ್ತು. ಮೊನ್ನೆ ಮೊನ್ನೆ ನಾಯಿಗಳ ಹಾಗೆ ಕಾದಾಡಿದವರು ಇವರೆ ಅಲ್ಲವೇನು? ಕಲಹದ ನಂತರ ಅವರ ಪ್ರೇಮ ಹತ್ತು ಪಟ್ಟು ಹೆಚ್ಚಾಗಿದೆ. ಈಗಷ್ಟೆ ಮದುವೆಯಾದವರಂತೆ ಬೈಕ್ ಮೇಲೆ ಗಂಡಹೆಂಡತಿ ಒಬ್ಬರಿಗೊಬ್ಬರು ಒತ್ತಿಕೊಂಡು ಕೂಡುವುದೇನು? ಆಕೆ ಗಂಡನ ಹೆಗಲನ್ನೊ, ಬೆನ್ನನ್ನೋ ಸವರಿಕೊಂಡು ಇಳಿಯುವುದೇನು? ಬಿಸಿಲಲ್ಲಿ ಬಂದಿಳಿದಾಗ ಸೆರಗಿನಿಂದ ಅವನ ಮುಖದ ಬೆವರು ಒರೆಸುವುದೇನು? ಮಕ್ಕಳನ್ನು ಇಬ್ಬರೂ ಮುದ್ದು ಮಾಡುವುದೇನು? ಅವರ ವರ್ತನೆ, ನಡೆ, ನುಡಿ ಹೇಗಿರುತ್ತಿತ್ತೆಂದರೆ ಅವರು ಎಂದೂ ಜಗಳದ ಮುಖವನ್ನೇ ನೋಡಿರಲಿಕ್ಕಿಲ್ಲ! ಗಂಡಹೆಂಡತಿಯರು ಇರುವುದಾದರೆ ಇವರಂತೆ ಇರಬೇಕು! ಇವರಂತೆ ಇರಲು ಸಾಧ್ಯವಾಗದಿದ್ದರೆ ಮದುವೆಯನ್ನೆ ಆಗಬಾರದು! ಜೀವನದ ಉತ್ಸಾಹವನ್ನು ಅವರಿಂದ ಜರೂರು ಕಲಿಯಬೇಕಿತ್ತು.

***

ಜೀವನದ ಬಂಡಿ ಸರಿದಾರಿಯ ಮೇಲೆ ಹೊರಟಿತೆಂದು ದೇವಪ್ಪ ಸಂತೋಷಗೊಂಡ. ಇತ್ತೀಚೆಗೆ ಅನಸವ್ವ ತುಂಬ ಒಳ್ಳೆಯವಳಾಗಿದ್ದಾಳೆ. ಈ ಪರಿವರ್ತನೆಗೆ ಏನು ಕಾರಣ! ಮೊನ್ನೆ ಆಕೆ ಹೇಳಿದಳೆಂದು ಹಿರಿಯ ಮಗಳಿಗೆ ನಾಲ್ಕು ಗುಂಜಿ ಬಂಗಾರ ತಂದಿದ್ದೆ? ಕಾರಣ ಏನೇ ಇರಲಿ, ಮೊದಲಿನ ಅನಸೂಯಾ ದಕ್ಕಿದಳೆಂದು ನಿರಾಳನಾದ. ಮದುವೆ, ಜಾತ್ರೆ, ದೇವರ ಕಾರ್ಯ ಎಂದೆಲ್ಲ ಆತ ಹೊರಗಡೆ ಹೊರಟನೆಂದರೆ ಅನಸವ್ವ ಮೊದಲಿನಂತೆ ಅಡ್ಡಗಾಲು ಹಾಕುವುದಿಲ್ಲ. ಮೊನ್ನೆ ದೇವಣ್ಣ ಬೆನಕಟ್ಟಿಯ ದೇಸೂರ ಮನೆತನದ ಮದುವೆ ಔತಣದ ಅಡುಗೆಗೆಂದು ಬಂದಿಳಿದ. ಅವನೊಂದಿಗೆ ಐದು ಜನ ಸಹಾಯಕರು. ಸುಮಾರು ಎರಡು ಸಾವಿರ ಜನರ ಊಟ. ಹಿಂದಿನ ರಾತ್ರಿ ಪೂರಿ, ಆಲೂಗೆಡ್ಡೆ ಪಲ್ಯ, ಕೊಬ್ಬರಿ ಚಟ್ನಿ ಹಾಗೂ ಶಾವಿಗೆ ಪಾಯಸ. ಮರುದಿನ ಮಧ್ಯಾಹ್ನದ ಊಟಕ್ಕೆ ಮೂರು ತರಹದ ಪಲ್ಯ, ರೊಟ್ಟಿ, ಚಪಾತಿ, ಬೂಂದಿಲಾಡು, ಚಿತ್ರಾನ್ನ ಮತ್ತು ಅನ್ನ ಸಾರು. ರಾತ್ರಿಯೆಲ್ಲ ಬೂಂದಿ ಕರಿದರು. ದೇವಣ್ಣನ ಬೂಂದಿಲಾಡು ಸೀಮೆಯಲ್ಲಿಯೇ ಪ್ರಸಿದ್ಧ. ಎರಡು ತಿಂಗಳಿಟ್ಟರೂ ಅದು ಕೆಡುತ್ತಿರಲಿಲ್ಲ. ಅದನ್ನು ಮುಟ್ಟಬೇಕೆನಿಸುವುದು. ಬಾಯಲ್ಲಿ ಇಟ್ಟುಕೊಳ್ಳಬೇಕೆನಿಸುವುದು. ಬಾಯಲ್ಲಿಟ್ಟರೆ ಕರಗಿ ಅದರ ಸ್ವಾದ, ರುಚಿ ನರನಾಡಿಗಳಲ್ಲಿ ಇಳಿಯುತ್ತಿತ್ತು.

ಕಡಲೆಬೇಳೆಯನ್ನು ಅವನೇ ಆರಿಸುತ್ತಿದ್ದ. ಹಿಟ್ಟು ಮಾಡಿಸುವುದು ಅವನ ಸುಪರ್ದಿಯಲ್ಲಿಯೇ ನಡೆಯಬೇಕು. ಹದವಾಗಿ ಹಿಟ್ಟು ಕಲಸುವ ರೀತಿ ಅವನಿಗೆ ಮಾತ್ರ ಗೊತ್ತಿದ್ದಂತೆ ಇತ್ತು. ಉಂಡಿ ಕಟ್ಟಿ ಮುಗಿಸಿದಾಗ ರಾತ್ರಿ ಕಳೆದು ಬೆಳಗಾಗಲು ಬಂದಿತ್ತು. ಎಲ್ಲರೂ ಅದು ಇದು ಮಾತನಾಡುತ್ತ, ನಿದ್ದೆ ತಡೆಹಿಡಿಯಲು ನಡುನಡುವೆ ಚಹಾ ಕುಡಿಯುತ್ತ, ಅನೂಹ್ಯ ಪರಿಮಳದ ಬೂಂದಿಲಾಡುಗಳನ್ನು ಕಟ್ಟಿ ಅಲ್ಯೂಮಿನಿಯಮ್ ಬೃಹತ್ ಪರಾತಗಳಲ್ಲಿ ಆರಲು ಇಟ್ಟಾಗ ಅದರ ಸುವಾಸನೆ ಸುತ್ತಲೂ ಹರಡಿತು. ತುಂಬ ಆಯಾಸಗೊಂಡಿದ್ದ ಅವರು ಸ್ವಲ್ಪ ಹೊತ್ತು ಅಲ್ಲಿಯೆ ಅಡ್ಡಾದರು. ದೇವಣ್ಣನಿಗೆ ಯಾವಾಗಲೂ ಮಲಗಿದ ಕೂಡಲೆ ಗಾಢ ನಿದ್ದೆ.